ಕರ್ನಾಟಕ ವಿಧಾನ ಸಭೆ

ಮಂಗಳವಾರ 12ನೇ ಜುಲೈ 2005 ರಂದು

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 11 ಗಂಟೆ 16 ನಿಮಿಷಕ್ಕೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಕೃಷ್ಣರವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದರು.

ಅಧ್ಯಕ್ಷರು: ಈಗ ಪ್ರಶ್ನೋತ್ತರ ವೇಳೆ. ಮೊದಲಿಗೆ ಮಾನ್ಯ ಹೆಚ್.ಸಿ. ಬಾಲಕೃಷ್ಣರವರ ಪ್ರಶ್ನೆ. ಮಾನ್ಯ ಸದಸ್ಯರು ಬಂದಿಲ್ಲವೆಂದು ಕಾಣುತ್ತದೆ. ಮಾನ್ಯ ಚೀಫ್ ವಿಪ್‌ರವರೆ, ಮಾನ್ಯ ಬಾಲಕೃಷ್ಣರವರು ಬಂದಿದ್ದಾರೆಯೇ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೇ, ಜನತಾದಳ(ಎಸ್) ಪಕ್ಷದ ಸದಸ್ಯರ್ಯಾರು ಬಂದಿಲ್ಲ.

ಅಧ್ಯಕ್ಷರು: ಮಾನ್ಯ ಚೀಫ್‌ವಿಪ್‌ರವರೆ, ನಿಮ್ಮ ಕಡೆಯಿಂದ ಇಷ್ಟು ಸಂಖ್ಯೆ ಇದ್ದರೆ ಹೇಗೆ? ನಿಮಗೆ ನಾವು ಎಷ್ಟು ಸಾರಿ ಹೇಳಬೇಕು?

ಶ್ರೀ ಆರಗ ಜ್ಞಾನೇಂದ್ರ: ಮಾನ್ಯ ಅಧ್ಯಕ್ಷರೆ, ಅವರು ಕಾಂಗ್ರೆಸ್ ಪಕ್ಷದ ಚೀಫ್ ವಿಪ್. ಈಗ ಜನತಾದಳ (ಎಸ್) ಸದಸ್ಯರಿಗೆ ಚೀಫ್ ವಿಪ್ ಒಬ್ಬರನ್ನೇ ಮಾಡಿದರೆ ಆಯಿತು.

ಅಧ್ಯಕ್ಷರು: ಮುಂದಿನ ಪ್ರಶ್ನೆ ಮಾನ್ಯ ದಿನೇಶ್ ಗುಂಡೂರಾವ್‌ರವರು ಕೇಳಲಿ. ಅವರೂ ಕೂಡ ಬಂದಿಲ್ಲ. ಆಗ ಮಾನ್ಯ ರಘುಪತಿ ಭಟ್ ರವರ ಪ್ರಶ್ನೆ. ತಾವೇನು ನಿಧಾನವಾಗಿ ಬರುತ್ತಿದ್ದಿರೀ? ನಿಮ್ಮ ಪ್ರಶ್ನೆ ಇದೆ ಎಂದು ನಿಮಗೆ ಗೊತ್ತಿರಲಿಲ್ಲವೇ ? ನಿಮ್ಮ ಪ್ರಶ್ನೆಯನ್ನು ಈಗ ಕೇಳಿ.

1. ಪ್ರಶ್ನೋತ್ತರಗಳು

ಅ) ಸದನದಲ್ಲಿ ಉತ್ತರಿಸುವ ಪ್ರಶ್ನೆಗಳು.

ಕರಾವಳಿ ಜಿಲ್ಲೆಗಳಲ್ಲಿ ಅಂತರ್ಜಲ ವೃದ್ಧಿಗೆ ಕೆರೆಗಳ ಹೂಳೆತ್ತುವಿಕೆ – ಕಂಡಿ ಅಣೆ

410 (5215) ಶ್ರೀ ರಘುಪತಿ ಭಟ್. ಕೆ. (ಉಡುಪಿ) :– ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರಾವಳಿ ಜಿಲ್ಲೆಗಳಲ್ಲಿ ಮಳೆಗಾಲದ ಬಳಿಕ ನದಿಯ ಉಪ್ಪು ನೀರು ಕೃಷಿ ಭೂಮಿ ಪ್ರದೇಶಕ್ಕೆ ಬಂದು ಕೃಷಿ ಭೂಮಿ ಮತ್ತು ಕುಡಿಯುವ

ನೀರಿನ ಬಾವಿಗಳ ಸಿಹಿ ನೀರು ಉಪ್ಪು ಮಿಶ್ರಿತಗೊಳ್ಳುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ಬಗ್ಗೆ ಕಿಂಡಿ ಅಣೆಕಟ್ಟು ನಿರ್ಮಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ;

ಇ) ಇದ್ದರೆ ಉಡುಪಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಎಷ್ಟು ಕಡೆ ಕಿಂಡಿ ಅಣೆಕಟ್ಟು ನಿರ್ಮಿಸಲು ಉದ್ದೇಶಿಸಲಾಗಿದೆ;

ಈ) ಈ ಸಮಸ್ಯೆ ಪರಿಹಾರದ ಬಗ್ಗೆ ಸಮಗ್ರ ಯೋಜನೆ ರೂಪಿಸಲಾಗಿದೆಯೇ, ಯಾವಾಗ ಅನುಷ್ಠಾನಗೊಳ್ಳಬಹುದು;

ಉ) ಅಂತರ್ಜಲ ವೃದ್ಧಿಗೆ ಕೆರೆಗಳ ಹೂಳೆತ್ತುವ ಬಗ್ಗೆ ಉಡುಪಿಗೆ ಎಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ, ಮುಂದೆ ಎಷ್ಟು ಬಿಡುಗಡೆ ಮಾಡಲಾಗುವುದು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು):

ಅ) ಬಂದಿದೆ.

ಆ) ಇದೆ.

ಇ) 3 ಸ್ಥಳಗಳಲ್ಲಿ ಕಿಂಡಿ ಅಣೆಕಟ್ಟುಗಳನ್ನು ನಿರ್ಮಿಸುವ ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ.

ಈ) ಹೌದು, ಅನುದಾನ ಲಭ್ಯತೆಯ ಆಧಾರದ ಮೇಲೆ ಹಂತ ಹಂತವಾಗಿ ಅನುಷ್ಠಾನಗೊಳಿಸಲಾಗುವುದು

ಉ) ಉಡುಪಿ ಮತಕ್ಷೇತ್ರದಲ್ಲಿ ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಯಲ್ಲಿ ಯಾವುದೇ ಕೆರೆಗಳಿರುವುದಿಲ್ಲ. ಆದುದರಿಂದ ಅನುದಾನ ಬಿಡುಗಡೆ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಕೆ. ರಘುಪತಿ ಭಟ್: ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಆದರೆ, ನಮಗೆ ಸಮರ್ಪಕವಾದ ಉತ್ತರ ಇಲ್ಲಿ ಸಿಗಲಿಲ್ಲ. ಈ ಉತ್ತರವನ್ನು ತೆಗೆದುಕೊಂಡು ನಾವು ನಮ್ಮ ಕ್ಷೇತ್ರದ ಜನರ ಹತ್ತಿರ ಹೋದರೆ ಜನರು ನಮಗೆ ಬಯ್ಯುವಂತ ಪರಿಸ್ಥಿತಿ ಇದೆ. ಉಡುಪಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಎಷ್ಟು ಕಡೆ ಕಿಂಡಿ ಅಣೆಕಟ್ಟು ನಿರ್ಮಿಸಲು ಉದ್ದೇಶಿಸಲಾಗಿದೆ ಎಂದು ಕೇಳಿದ್ದಕ್ಕೆ, ಕೇವಲ ಮೂರು ಕಡೆಯ ಪ್ರಸ್ತಾಪ

ಮಾತ್ರ ಇದೆ ಎಂದು ಉತ್ತರ ಹೇಳಿದ್ದಾರೆ. ನನ್ನ ಕ್ಷೇತ್ರದಲ್ಲಿ ಕನಿಷ್ಟ 12 ಕಡೆಯ ಪ್ರಸ್ತಾವನೆ ಈಗಾಗಲೇ ಸಣ್ಣ ನೀರಾವರಿ ಇಲಾಖೆಯ ಮೂಲಕ ಸರ್ಕಾರಕೆ ಬಂದಿದೆ. ಆದರೆ, ಇಲ್ಲಿ ಪ್ರಸ್ತಾವನೆಯನ್ನು ಇಲ್ಲವೆಂದು ಹೇಳಿದ್ದಾರೆ. ಮತ್ತೆ ಈ ಸಮಸ್ಯೆ ಪರಿಹಾರದ ಬಗ್ಗೆ ಸಮಗ್ರ ಯೋಜನೆ ರೂಪಿಸಲಾಗಿದೆಯೇ ಎಂದು ಕೇಳಿರತಕ್ಕಂಥ ಪ್ರಶ್ನೆಗೆ ಅನುದಾನ ಲಭ್ಯತೆಯ ಆಧಾರದ ಮೇಲೆ ಹಂತ ಹಂತವಾಗಿ ಅನುಷ್ಠಾನಗೊಳಿಸಲಾಗುವುದೆಂದು ಹೇಳಿದ್ದಾರೆ. ಹಿಂದೆ ಇದೇ ಖಾತೆಯಲ್ಲಿ ಪಶ್ಚಿಮ ವಾಹಿನಿ ಯೋಜನೆಯನ್ನು ರೂಪಿಸಲಾಗಿತ್ತು. ಆದರೆ, ಇವರು ನೀಡಿರತಕ್ಕಂಥ ಉತ್ತರದಲ್ಲಿ ಇದರ ಬಗ್ಗೆ ಪ್ರಸ್ತಾವನೆ ಇಲ್ಲ. ಪಶ್ಚಿಮ ವಾಹಿನಿ ಯೋಜನೆ ಮೂಲಕ ನಮ್ಮ ಕರಾವಳಿ ಭಾಗದಲ್ಲಿ ಹೆಚ್ಚಿನ ಕಡೆ ಕಿಂಡಿ ಅಣೆಕಟ್ಟುಗಳನ್ನು ರಚಿಸಿ ಉಪ್ಪು ನೀರನ್ನು ತಡೆಗಟ್ಟುವಂತಹ ಒಂದು ಯೋಜನೆಯನ್ನು ಹಮ್ಮಿಕೊಳ್ಳಲಾಗಿತ್ತು. ಆದರೆ, ಇದರ ಬಗ್ಗೆ ಯಾವುದೇ ಪ್ರಸ್ತಾವನೆ ಇಲ್ಲ. ಬಹುಶ: ನನಗೆ ತಿಳಿದ ಮಟ್ಟಿಗೆ ಇದು ಕೇಂದ್ರ ಸರ್ಕಾರದ ಹಂತದಲ್ಲಿದೆ. ಆದರೆ ಇದರ ಬಗ್ಗೆ ಪ್ರಸ್ತಾವನೆ ಇಲ್ಲ. ನಮ್ಮ ಕರಾವಳಿ ಜಿಲ್ಲೆಯಲ್ಲಿ ಕುಡಿಯುವ ನೀರಿನ ಒಂದು ದೊಡ್ಡ ಸಮಸ್ಯೆಗೆ ಪರಿಹಾರ ಯೋಜನೆ ಏನೆಂದರೆ, ಉಪ್ಪು ನೀರನ್ನು ತಡೆಗಟ್ಟುವಂಥ ಕಿಂಡಿ ಅಣೆಕಟ್ಟುಗಳನ್ನು ರಚಿಸುವಂಥ ಒಂದು ಒಳ್ಳೆಯ ಯೋಜನೆ ಎಂದು ನಾವು ತಿಳಿದುಕೊಂಡಿದ್ದೇವೆ. ಆದರೆ, ನಮ್ಮ ದೌರ್ಭಾಗ್ಯದ ಸಂಗತಿ ಏನೆಂದರೆ, ಇತ್ತೀಚಿನ ವರ್ಷಗಳಲ್ಲಿ ಅಂದರೆ ಕಳೆದ ಎರಡು ವರ್ಷಗಳಲ್ಲಿ ಹೊಸ ಕಿಂಡಿ ಅಣೆಕಟ್ಟು ನಮ್ಮ ಕ್ಷೇತ್ರಕ್ಕೆ ಯಾವುದೂ ಕೂಡ ಆಗಿಲ್ಲ. ಇವತ್ತಿನ ದಿವಸ ಕಿಂಡಿ ಅಣೆಕಟ್ಟುಗಳನ್ನು ರಚನೆ ಮಾಡುವುದರಿಂದ ಸಮುದ್ರದಿಂದ ಬರತಕ್ಕಂಥ ಉಪ್ಪು ನೀರು ಸಿಹಿ ನೀರಿನ ಪ್ರದೇಶಗಳಿಗೆ ಬರತಕ್ಕಂಥದ್ದನ್ನು ತಡೆಯಬಹುದಾಗಿದೆ. ಮತ್ತೆ ನಮ್ಮ ಕಡೆ ಇರತಕ್ಕಂಥ ಸಿಹಿ ನೀರು ಸಮುದ್ರಕ್ಕೆ ಹೋಗತಕ್ಕಂಥದ್ದನ್ನು ತಡೆಗಟ್ಟಬಹುದು. ಹಾಗೆಯೇ ಅಂತರ್ಜಲ ವೃದ್ಧಿಗೆ ಪ್ರಯೋಜನವಾಗುತ್ತದೆ. ಆದ್ದರಿಂದ ಮಾನ್ಯ ಹಿರಿಯ ಸಚಿವರಲ್ಲಿ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ ಕಿಂಡಿ ಅಣೆಕಟ್ಟು ನಮ್ಮ ಕ್ಷೇತ್ರಕ್ಕೆ ವಿಶೇಷವಾಗಿ ಬೇಕಾಗಿರುವುದರಿಂದ ಇದೇ ವರ್ಷದಲ್ಲಿ ನಬಾರ್ಡ್‌ನಿಂದ ಮಂಜೂರು ಮಾಡಿಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ ಕರಾವಳಿ ಜಿಲ್ಲೆಗಳ ಪ್ರದೇಶಗಳಲ್ಲಿ ಬೇಸಿಗೆ ತಿಂಗಳಲ್ಲಿ ಸಮುದ್ರದ ಉಬ್ಬರ-ಇಳಿತ ಆದ ಮೇಲೆ ಸಹಜವಾಗಿ ಉಪ್ಪು ನೀರು ಮತ್ತು ಸಿಹಿ ನೀರು ಎರಡೂ ಕೂಡ ಒಂದಕ್ಕೊಂದು ಸೇರತಕ್ಕಂಥ ಸಾಧ್ಯತೆ ಇದೆ. ಇದರಿಂದ ಕೃಷಿ ಭೂಮಿಗೆ ಮತ್ತು ಕುಡಿಯುವ ನೀರಿಗೆ ತೊಂದರೆ ಆಗುತ್ತದೆಂಬ ಅರಿವು ಸರ್ಕಾರಕ್ಕೂ ಕೂಡ ಇದೆ. ಈ ನಿಟ್ಟಿನಲ್ಲಿ ಸರ್ಕಾರ ಒಂದು ಯೋಜನೆಯನ್ನೂ ಕೂಡ ರೂಪಿಸಿದೆ.

ಸುಮಾರು 295 ಕೋಟಿ ರೂಪಾಯಿಗಳ ಒಂದು ಯೋಜನೆ ತಯಾರು ಮಾಡಿ ಅದನ್ನು ಕೇಂದ್ರ ಸರ್ಕಾರಕ್ಕೆ ಕೂಡ ನಾವು ಕಳುಹಿಸಿದ್ದೇವೆ. ಕೇಂದ್ರ ಸರ್ಕಾರದಿಂದ ಅದರ ಬಗ್ಗೆ ಇನ್ನೂ ಯಾವುದೇ ಒಂದು ಹೆಚ್ಚಿನ ಮಾಹಿತಿ ನಮಗೆ ಬಂದಿಲ್ಲ ಮತ್ತು ಆ ಪ್ರಸ್ತಾವನೆ ಬಗ್ಗೆ ನಮ್ಮ ಮಟ್ಟದಲ್ಲಿ ಇವತ್ತು ನಾವು ಪ್ರಯತ್ನ ಮಾಡುತ್ತಿದ್ದೇವೆ. ಇದಕ್ಕೆ ಇನ್ನೂ ಹೆಚ್ಚಿನ ಸಹಕಾರ ಕೂಡ ಸಿಕ್ಕಿಲ್ಲ. ಸುಮಾರು 1400 ಅಣೆಕಟ್ಟುಗಳು ಇದರಲ್ಲಿ ಕಟ್ಟತಕ್ಕಂಥ ವ್ಯವಸ್ಥೆಯನ್ನು ನಾವು ಮಾಡಿದ್ದೇವೆ. ಅದಕ್ಕೆ ನಾನು ಪುನ: ಪ್ರಯತ್ನ ಪಡುತ್ತೇನೆ. ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಅಥವಾ ಅವರಿಂದ ಇನ್ನೊಂದು ಪತ್ರವನ್ನು ಬರೆಯಿಸಿ ಇಲ್ಲಿಂದ ನಮ್ಮ ಒಂದು ಯೋಜನೆಯನ್ನು ನಾವು ಕೇಂದ್ರ ಸರ್ಕಾರಕ್ಕೆ ಕೊಟ್ಟು ಕಳುಹಿಸಿದ್ದೇವೆ, ಅದನ್ನು ಒಪ್ಪಿಸಲೇಬೇಕು ಎನ್ನಂತಕ್ಕಂಥದ್ದು ಮತ್ತು ಇದರ ಬಗ್ಗೆ ನಮ್ಮ ಪಾರ್ಲಿಮೆಂಟ್ ಸದಸ್ಯರಿಗೂ ಕೂಡ ಸ್ವಲ್ಪ ಮಾಹಿತಿಯನ್ನು ಕೊಟ್ಟು ಅಲ್ಲಿ ಪ್ರೆಷರ್ ಹಾಕಿ ಇದಕ್ಕೆ ಆದಷ್ಟು ಒಪ್ಪಿಗೆ ಕೊಡತಕ್ಕಂಥದ್ದು ಮಾಡತಕ್ಕಂಥದ್ದು. ನಬಾರ್ಡ್ ಯೋಜನೆಯ ಕೆಳಗಡೆ ಎಲ್ಲವನ್ನೂ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ, ಅವರಿಗೆ ಗೊತ್ತಿದ್ದಂತೆ ನಾವು ಒಂದೊಂದು ಕ್ಷೇತ್ರಕ್ಕೆ 50 ಲಕ್ಷ ರೂಪಾಯಿ ಒಂದು ಕೋಟಿ, ರೂಪಾಯಿ 20 ಲಕ್ಷ ರೂಪಾಯಿಗಳು, ಈ ರೀತಿಯಾಗಿ ಹೆಚ್ಚು ಕಡಿಮೆ ನಮ್ಮ ಹಣದ ಆಧರದ ಮೇಲೆ ನಾವು ಹಂಚುತ್ತೇವೆ. ಆದರೆ ಇಲ್ಲಿ ಮೂರು ಪ್ರಸ್ತಾವನೆ ಇದೆ. ಅವುಗಳೆ ಏನೆಂದರೆ, ಈ ಸಾರಿ ಕನಿಷ್ಟ ಪಕ್ಷ 15 ರಲ್ಲಿ ಸುಮಾರು ಮೂರನ್ನಾದರೂ ತೆಗೆದುಕೊಳ್ಳಬೇಕು ಎನ್ನತಕ್ಕಂಥದ್ದು ಪ್ರಸ್ತಾವನೆ ನಮ್ಮ ವತಿಯಿಂದ ಇದೆ. ನಿಮ್ಮ ಪ್ರಸ್ತಾವನೆ 10, 20 ಇರಬಹುದು. ಆದರೆ ಹಣದ ಲಭ್ಯತೆಯ ಪ್ರಕಾರ ನಾವು ಇದರಲ್ಲಿ ಮೂರು ಸೆಲೆಕ್ಟ್ ಮಾಡಿ

ಹಿರೆಬೆಟ್ಟ ಗ್ರಾಮದ ಬಾಲಟ್ ನಡಿಕಟ್ ಎಂಬಲ್ಲಿ ಕಿಂಡಿ ಅಣೆಕಟ್ಟು ಕಡಿ ಗ್ರಾಮದ ನಾಲೋಡಿ ಎಂಬಲ್ಲಿ ಕಿಂಡಿ ಅಣೆಕಟ್ಟು ಮತ್ತು ಕೂಡಿಬೆಟ್ಟು ಗ್ರಾಮದ ಗುಂಡೆಟೆಕ್ ಸೇತುವೆ ಬಳಿ 40 ಲಕ್ಷ ರೂಪಾಯಿಗಳ ಯೋಜನೆ ಇದೆ. ಹೀಗೆ ಸುಮಾರು 80 ಲಕ್ಷ ರೂಪಾಯಿಗಳು ಒಂದು ಯೋಜನೆಯನ್ನು ಈ ಒಂದು ಮತಕ್ಷೇತ್ರದಲ್ಲಿ ಮಾಡಬೇಕು ಎನ್ನತಕ್ಕಂಥದ್ದನ್ನು ಪ್ರಪೋಸಲ್‌ನ್ನು ನಾವು ಇಟ್ಟುಕೊಂಡು ನಬಾರ್ಡ್‌ಗೆ ಕಳುಹಿಸುತ್ತಿದ್ದೇವೆ. ಅದು ಒಪ್ಪಿಗೆಯಾಗಿ ಬಂದ ಮೇಲೆ ಆ ಮೂರು ಕೆಲಸಗಳು ಪ್ರಾರಂಭವಾಗುತ್ತವೆ. ಉಳಿದ 1400 ಬಲ್ಕ್ ಆಗಿ ಇವತ್ತು ನಾವು ಮಾಡಬೇಕೆಂದು ಹೇಳಿ ಒಂದು ಯೋಜನೆಯನ್ನು ಹಾಕಿಕೊಂಡಿದ್ದೇವೆ. ಅದಕ್ಕೆ ಕೇಂದ್ರ ಸರ್ಕಾರದ ಒಪ್ಪಿಗೆ ಬಂದರೆ ಒಳ್ಳೆಯದು. ಇಲ್ಲದಿದ್ದರೆ ನಾವು ಹಂತ ಹಂತವಾಗಿ ತೆಗೆದುಕೊಳ್ಳತಕ್ಕಂತಹ ಪ್ರಯತ್ನವನ್ನು ಮಾಡಬೇಕಾಗುತ್ತದೆ. ಇಷ್ಟೊಂದು ಹಣ ಏಕಕಾಲದಲ್ಲಿ ಒಂದೇ ಕಡೆ ಕೂಡ ಖರ್ಚು ಮಾಡುವುದಕ್ಕಾಗುವುದಿಲ್ಲ. ಅದಕ್ಕಾಗಿ ಈ ಪ್ರಪೋಸಲ್ ಬಗ್ಗೆ ಏನು ಬರುತ್ತದೆಂದು ನಾವು ಕಾದು ನೋಡೋಣ.

ಶ್ರೀ ಕೆ. ರಘುಪತಿ ಭಟ್. ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಹೇಳಿದ್ದರಲ್ಲಿ ಮೂರನೆಯದ್ದು ಬಹಳ ಪ್ರಾಮುಖ್ಯವಾದದ್ದು ಇದೆ. ಅದರೊಟ್ಟಿಗೆ ಅಲೆಗೂರ ಗ್ರಾಮ ಪಂಚಾಯಿತಿಯ ವ್ಯಾಪ್ತಿಯ ಕೆಂಪ್ತೂರು ಹಿಂದೆ ಇದ್ದಂಥ ಕಿಂಡಿ ಅಣೆಕಟ್ಟು ಸಂಪೂರ್ಣ ಹೋಗಿ ಆ ಭಾಗದ ಎಲ್ಲಾ ಭಾಗದ ರೈತರಿಗೆ ಕೃಷಿ ಮಾಡಲಿಕ್ಕೆ ತೊಂದರೆಯಾಗಿದ್ದು ಉಪ್ಪು ನೀರು ಆಚೆ ಬರುತ್ತಿದ್ದು, ದಯವಿಟ್ಟು ಈ ಪ್ರಸ್ತಾವನೆಯಲ್ಲಿ ಕೆಂಪ್ತೂರು ಕಿಂಡಿ ಅಣೆಕಟ್ಟಿಗೆ ಸುಮಾರು 60 ಲಕ್ಷ ರೂಪಾಯಿಗಳು ರಿಪೇರಿ ಸಲುವಾಗಿ ಒಂದು ಎಸ್ಟಿಮೇಟ್ ಆಗಿದೆ, ಆದ್ದರಿಂದ ಅದನ್ನು ಸಹ ಸೇರಿಸಿಕೊಳ್ಳಬೇಕೆಂದು ನಾನು ವಿನಂತಿಯನ್ನು ಮಾಡಿಕೊಳ್ಳುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಇದರಲ್ಲಿ ಯಾವುದನ್ನು ತೆಗೆದು ಯಾವುದನ್ನು ಸೇರಿಸಿಕೊಳ್ಳಬೇಕು ಎನ್ನುವುದರ ಬಗ್ಗೆ ನಾನು ಪರಿಶೀಲನೆಯನ್ನು ಮಾಡುತ್ತೇನೆ. ನಂತರ ಅದನ್ನು ಸೇರಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.